ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/01/ಐಡಿಪಿ/2023-24

ಆಯುಕ್ತರವರ ಕಛೇರಿ,
ಅರಮನೆ ರಸ್ತೆ, ಬೆಂಗಳೂರು-01,
ದಿನಾಂಕ: 24.09.2024

ಸುತ್ತೋಲೆ

ವಿಷಯ : ವಿಶ್ವ ಹೃದಯ ದಿನದ ಅಂಗವಾಗಿ "ಹೃದಯಕ್ಕಾಗಿ ನಡಿಗೆ" "WALKATHON" ಎಂಬ ವಿಶೇಷ ಕಾರ್ಯಕ್ರಮದಲ್ಲಿ ಭಾಗವಹಿಸುವ ಬಗ್ಗೆ.

ಉಲ್ಲೇಖ : Tathagat Heart Care Centre ವ್ಯವಸ್ಥಾಪಕ ನಿರ್ದೇಶಕರವರ ಪತ್ರದ ದಿನಾಂಕ: 03.09.2024

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಪರಿಸ್ಥಿತಿಯಲ್ಲಿ ಜೀವನಶೈಲಿಯ ಪ್ರಭಾವಗಳಿಂದ ಹೃದಯಘಾತ ಮತ್ತು ಹೃದ್ರೋಗಗಳಿಗೆ ಸಂಬಂಧಪಟ್ಟಂತೆ ಕಾಯಿಲೆಗಳು ಭಾರತದಲ್ಲಿ ಗಮನಾರ್ಹವಾಗಿ ಮತ್ತು ಆತಂಕಕಾರಿಯಾಗಿ, ಹೆಚ್ಚಿನ ಪ್ರಮಾಣದಲ್ಲಿ ಜನಸಾಮಾನ್ಯರಲ್ಲಿ ಕಾಣಿಸಿಕೊಳ್ಳುತ್ತಿದ್ದು, ವಿಶೇಷವಾಗಿ ಯುವಜನತೆಯೂ ಬಳಲುತ್ತಿದ್ದಾರೆ ಹೃದಯಘಾತಗಳು ಅನೇಕ ಯುವಜನತೆಯ ಪ್ರಾಣಹಾನಿ ಮಾಡುತ್ತಿದ್ದು, ಜೀವನಶೈಲಿಯ ಅವಲಂಬಿತ ರೋಗಗಳಾದ ಮಧುಮೇಹ, ಅಧಿಕ ರಕ್ತದೊತ್ತಡ, ಹೃದಯಘಾತ , ಪಾರ್ಶ್ವವಾಯು ಮತ್ತಿತರ ಕಾಯಿಲೆಗಳ ಬಗ್ಗೆ ಜನಸಾಮಾನ್ಯರಲ್ಲಿ ಮತ್ತು ಯುವಜನತೆಯಲ್ಲಿ ಅರಿವು ಮತ್ತು ಜಾಗೃತಿ ತರುವುದು ಅವಶ್ಯಕವಾಗಿದೆ.

ಈ ನಿಟ್ಟಿನಲ್ಲಿ "ವಿಶ್ವ ಹೃದಯ ದಿನ"ದ ಅಂಗವಾಗಿ ತಥಾಗತ್ ಹೃದ್ರೋಗ ಆಸ್ಪತ್ರೆ, ಭಾರತೀಯ ಹೃದ್ರೋಗ ಸಂಘ ಹಾಗೂ ಲಯನ್ಸ್ ಕ್ಲಬ್, ಸಾರ್ವಜನಿಕರು ಹಾಗೂ ಬೆಂಗಳೂರು ನಗರದ ಸರ್ಕಾರಿ, ಖಾಸಗಿ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ದಿನಾಂಕ: 28.09.2024 ರಂದು ಬೆಳಗ್ಗೆ 8.00 ಗಂಟೆಗೆ ಸೆಂಟ್ ಥೆರೆಸಾ ಆಸ್ಪತ್ರೆಯಿಂದ ಹೊರಟು ಡಾ// ರಾಜ್‌ಕುಮಾರ್ ರಸ್ತೆ ಓರಿಯನ್ ಮಾಲ್ ಇಸ್ಕಾನ್ ಟೆಂಪಲ್, ರಾಜಾಜಿನಗರ ಮಾರ್ಗವಾಗಿ "ಹೃದಯಕ್ಕಾಗಿ ನಡಿಗೆ "WALKATHON" ಎಂಬ ವಿಶೇಷ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳು ಭಾಗವಹಿಸಲು ಬೆಂಗಳೂರು ನಗರದ ಸರ್ಕಾರಿ, ಖಾಸಗಿ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರಿಗೆ ಸೂಚಿಸಿದೆ.

ನಿರ್ದೇಶಕರು

ಇವರಿಗೆ:

1. ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ/ಖಾಸಗಿ ಅನುದಾನಿತ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ - ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. Tathagat Heart Care Centre ವ್ಯವಸ್ಥಾಪಕ ನಿರ್ದೇಶಕರವರ ಮಾಹಿತಿಗಾಗಿ.
3. ಇ - ಆಡಳಿತ -ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.